ಅ) ಹೊಸ ಜಿಲ್ಲೆಗಳಲ್ಲಿ ಸರ್ಕಾರ ಈಗಾಗಲೇ ಜಿಲ್ಲಾ ನ್ಯಾಯಾಲಯಗಳನ್ನು ಪ್ರಾರಂಭಿಸಿದೆಯೇ?

ಆ) ಹಾವೇರಿ ಜಿಲ್ಲೆಯಲ್ಲಿ ಜಿಲ್ಲಾ ನ್ಯಾಯಾಲಯ ಪ್ರಾಂಭಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು

ಇ) ಹೊಸ ಜಿಲ್ಲಾ ನ್ಯಾಯಾಲಯ ಪ್ರಾರಂಭಿಸಲು ವಿಳಂಬಕ್ಕೆ ಕಾರಣಗಳೇನು?

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಹೊಸದಾಗಿ ಸೃಜಿಸಲಾದ ಜಿಲ್ಲೆಗಳಲ್ಲಿ ದಾವಣಗೆರೆ ಗದಗ, ಬಾಗಲಕೋಟೆ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ಜಿಲ್ಲಾ ನ್ಯಾಯಾಲಯಗಳನ್ನು ಸ್ಥಾಪಿಸಲಾಗಿದೆ.

ಆ) ಹಾವೇರಿ ಜಿಲ್ಲೆಗೆ ಜಿಲ್ಲಾ ನ್ಯಾಯಾಧೀಶರ ಹುದ್ದೆಯನ್ನು ಸೃಜಿಸುವ ವಿಷಯ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಹಾಲಿಯಿರುವ ನ್ಯಾಯಾಲಯ ಕಟ್ಟಡವನ್ನು ಸೂಕ್ತವಾಗಿ ಮಾರ್ಪಡಿಸಿದ ನಂತರ ಹಾಗೂ ಜಿಲ್ಲಾ ನ್ಯಾಯಾಧೀಶರ ಹುದ್ದೆಯನ್ನು ಸೃಜಿಸಿದ ನಂತರ ಹಾವೇರಿಯಲ್ಲಿ ಜಿಲ್ಲಾ ನ್ಯಾಯಾಲಯವನ್ನು ಸ್ಥಾಪಿಸಲಾಗುವುದು.

ದಾವಣಗೆರೆ - ಸಿಸ್ಗಿ ನಂದಿಗುಡಿ ಸೇತುವೆ ಮಾರ್ಗ ರಾಜ್ಯ ಹೆದ್ದಾರಿ ಕುರಿತು

1017 (1262) ಶ್ರೀ ಬಿ.ಹೆಚ್. ಬನ್ನಿಕೋಡ್ (ಹಿರೇಕೆರೂರು) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ದಾವಣಗೆರೆಯಿಂದ ಸಿಸಿಸ್ಗಿ ನಂದಿಗುಡಿ ಸೇತುವೆ ಮೂಲಕ ರಸ್ತೆಯನ್ನು ರಾಜ್ಯ ಹೆದ್ದಾರಿಯನ್ನಾಗಿ ಅಭಿವೃದ್ಧಿ ಪಡಿಸಲು ಸರ್ಕಾರ ಗಮನಹರಿಸಿದೆಯೆ; ಹಾಗಿದ್ದಲ್ಲಿ, ಈ ಬಗ್ಗೆ ತೆಗೆದುಕೊಂಡ ಕ್ರಮಗಳೇನು?

ಆ) ಈ ಕಾಮಗಾರಿಗೆ ತಗಲುವ ವೆಚ್ಚ ಹಾಗೂ ಮಾರ್ಗದ ಉದ್ದಳತೆ ಎಷ್ಟು?

ಇ) ಯಾವ ಯೋಜನೆಯಡಿಯಲ್ಲಿ ಈ ಕಾಮಗಾರಿ ಕೈಗೆತ್ತಿಕೊಳ್ಳಲು ಸರ್ಕಾರ ಯೋಚಿಸಿದೆ; ಹಾಗೂ ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು?

ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಗೆ ಅನುದಾನ

1018 (1216) ಶ್ರೀ ಬೆಳ್ಳುಬ್ಬಿ ಸಂಗಪ್ಪ ಕಲ್ಲಪ್ಪ (ಬಸವನಬಾಗೇವಾಡಿ) : ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಯಲುಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯ ಸಲುವಾಗಿ ಈ ವರ್ಷ ಬಿಡುಗಡೆ ಮಾಡಿರುವ ಹಣವೆಷ್ಟು;

ಅ) ಒಟ್ಟಾರೆ ಇರುವ ಅನುದಾನವೆಷ್ಟು, ಹಾಗೂ ಕ್ಷೇತ್ರವಾರು ಬಿಡುಗಡೆಯಾಗುವ ಮೊತ್ತವೆಷ್ಟು;

ಇ) ಇದುವರೆವಿಗೂ ಬಸವನಬಾಗೇವಾಡಿ ಕ್ಷೇತ್ರಕ್ಕೆ ಈ ಮಂಡಳಿಯಿಂದ ಬಿಡುಗಡೆಯಾದ ಹಣವೆಷ್ಟು?

ಶ್ರೀ ಬಿ. ರಮಾನಾದ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :

ಅ) 460 ಲಕ್ಷ ರೂಗಳು

ಆ) ಅನುದಾನ 900 ಲಕ್ಷ ರೂಗಳು. ಈವರೆಗೆ ಬಿಡುಗಡೆಯಾದ ಅನುದಾನದಲ್ಲಿ, ಪ್ರತಿ ಕ್ಷೇತ್ರಕ್ಕೆ 4.60 ಲಕ್ಷ ರೂಗಳು ಲಭ್ಯವಾಗುತ್ತದೆ.

ವರ್ಷ	ಬಿಡುಗಡೆಯಾದ ಹಣ (ಲಕ್ಷ ರೂಗಳು)
1996-97	7.40
1997-98	5.92
1998-99	5.89
1999-2000	5.00
2000-2001	2.20
	ಫೆಬ್ರವರಿ 2001ರವರೆಗೆ

ರಾಜ್ಯದಲ್ಲಿರುವ ವಿವಿಧ ರಸ್ತೆಗಳ ಅಳತೆ ಮಾಡುವುದು

1019 (1460) ಶ್ರೀ ಬೆಲ್ಲದ್ ಚಂದ್ರಕಾಂತ್ ಗುರಪ್ಪ (ಧಾರವಾಡ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿರುವ ವಿವಿಧ ರಸ್ತೆಗಳು ಎಷ್ಟು; ಅವುಗಳ ಉದ್ದ ಎಷ್ಟು; ಕಿ.ಮೀ. ಗಳಲ್ಲಿ;

ಆ) ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಜಿಲ್ಲಾ ರಸ್ತೆಗಳಿಗೆ 1999-2000 ರಲ್ಲಿ ನಿಗಧಿ ಮಾಡಿದ ಹಾಗೂ ಖರ್ಚು ಮಾಡುವ ಹಣ ಎಷ್ಟು?

ಇ) 2000-2001ರಲ್ಲಿ ಯಾವ ರಸ್ತೆಗಳಿಗೆ ಎಷ್ಟೆಷ್ಟು ಹಣ ನಿಗದಿಪಡಿಸಿದೆ ಹಾಗಟ ದಿನಾಂಕ 30-02-2001ಕ್ಕೆ ಎಷ್ಟೆಷ್ಟು ಹಣ ವೆಚ್ಚ ಮಾಡಲಾಗಿದೆ?